## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ.820/2015

ಸಾಕ್ಷಿಗೆ ದಿನಾಂಕ 05-12-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 8 P.W.: 7

| | | |
|---|---|---|
| ಹೆಸರು | : | ಗಿರೀಶ್ ಕೆ ಎನ್ |
| ತಂದೆಯ ಹೆಸರು | : | ನಾಗರಾಜಪ್ಪ |
| ವಯಸ್ಸು | : | 54 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ ಸ್ಥಳ | : | ದಾವಣಗೆರೆ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಚಾಸಾ-1 ನನ್ನ ಹೆಂಡತಿ, ಚಾಸಾ-6 ನನ್ನ ಅತ್ತೆ, ಚಾಸಾ-7 ನನ್ನ ಮಾವ, ಚಾಸಾ-9 ನನ್ನ ಮಾವ, ಚಾಸಾ-10 ನನ್ನ ಪರಿಚಯಸ್ಥರು ಇರುತ್ತಾರೆ.

ಹಂಪಸಾಗರ-2 ಗ್ರಾಮದಲ್ಲಿ ನನ್ನ ಮಾವನಾದ ಚಾಸಾ-7 ರವರ ವಾಸದ ಮನೆ ಇರುತ್ತದೆ. ದಿಃ13-12-2014 ರಂದು ಯಾರೋ ಕಳ್ಳರು ನಮ್ಮ ಮಾವನ ಮನೆಯ ಬಾಗಿಲ ಬೀಗವನ್ನು ಮುರಿದು ಒಳಗೆ ಹೋಗಿ ಗಾಡ್ರೆಜಿನ ಬೀರೋಗಳನ್ನು ಒಡೆದು ಬಂಗಾರದ ಒಡವೆಗಳು ಮತ್ತು ರೇಷ್ಮೆ ಸೀರೆಗಳನ್ನು ಕಳವು ಮಾಡಿರುತ್ತಾರೆ. ಬಂಗಾರವೆಂದರೆ 2 ಹರಳಿನ ಉಂಗುರ, ಒಂದು ಚೈನ್ ಸರ, ಒಂದು ಬೋರ್ಮಾಳ ಸರ ಮತ್ತು ಒಂದು ಜೊತೆ ಬೆಂಡೋಲೆ ಜುಮುಕಿ ಹಾಗೂ ಒಂದು ಗಟ್ಟಿ ಬಂಗಾರ ಒಟ್ಟು 46 ಗ್ರಾಂ ತೂಕ ಇರುತ್ತದೆ. ರೇಷ್ಮೇ ಸೀರೆ 20 ಇದ್ದು ನಗದು ರೂ.5500/- ಸಹಾ ಕಳುವಾಗಿರುತ್ತದೆ. ಘಟನೆಯ ಕುರಿತು ಚಾಸಾ-1 ರವರು ಪೋಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆ. ಪೋಲೀಸರ ಮುಂದೆ ನಾನು ಹೇಳಿಕೆ ನೀಡಿದ್ದೇನೆ.

ದಿಃ 30-12-2014 ರಂದು ಪೋಲೀಸರು ಠಾಣೆಗೆ ಬರಲು ಕರೆ ಮಾಡಿದರು. ನಾವು ಠಾಣೆಗೆ ಆ ದಿನ ಹೋಗಿರುತ್ತೇವೆ ಅಲ್ಲಿ ಪೋಲೀಸರು 4 ಜನ ಆರೋಪಿತರಿಗೆ ವಿಚಾರಣೆ ಮಾಡಿರುತ್ತಾರೆ. ಪೋಲೀಸರು ಮೇಲೆ ಹೇಳಿದ ಕಳುವಾದ ವಸ್ತುಗಳನ್ನು ಮತ್ತು ನಗದನ್ನು ಆರೋಪಿತರಿಂದ ವಾಪಾಸ್ ಕೊಡಿಸಿರುತ್ತಾರೆ. ನಮ್ಮ ಮಾವನವರನ್ನು ಪೋಲೀಸರು ನಂತರದಲ್ಲಿ ಕರೆದು ಸದರಿ ಕಳುವಾದ ವಸ್ತುಗಳನ್ನು ನಮ್ಮ ಮಾವನವರಿಗೆ ಕೊಟ್ಟಿರುತ್ತಾರೆಂತಾ ನಮ್ಮ ಮಾವನವರು ಹೇಳಿರುತ್ತಾರೆ. ಆರೋಪಿತರು ನಾವು ಕಳ್ಳತನ ಮಾಡಿ ಸದರಿ ವಸ್ತುಗಳನ್ನು ತೆಗೆದುಕೊಂಡು ಹೋಗಿರುತ್ತೇವಂತಾ ಪೋಲೀಸರ ಮುಂದೆ ಹೇಳಿರುತ್ತಾರೆ. ಆರೋಪಿತರನ್ನು

ನೋಡಿದರೆ ನನಗೆ ಗುರುತು ಹಿಡಿಯಲು ಸಾಧ್ಯವಿಲ್ಲ. ಸುಮಾರು 14 ವರ್ಷವಾಗಿರುವುದರಿಂದ ಅವರನ್ನು ನೋಡಿದರೆ ನನಗೆ ಗುರುತಿಸಲು ಸಾಧ್ಯವಿಲ್ಲ. 3 ನೇ ಆರೋಪಿ ನ್ಯಾಯಾಲಯದ ಮುಂದೆ ಹಾಜರಿರುತ್ತಾನೆ. 1 ಮತ್ತು 2 ನೇ ಆರೋಪಿತರು ನ್ಯಾಯಾಲಯದಲ್ಲಿ ಗೈರುಹಾಜರಾಗಿರುತ್ತಾರೆ. ಕಳುವಾದ ಬಂಗಾರದ ಆಭರಣಗಳು, ಸೀರೆಗಳನ್ನು ನೋಡಿದರೆ ಗುರುತಿಸುತ್ತೀರಾ ಎಂದರೆ ಸಾಕ್ಷಿಯು ನಾನು ನೋಡಿಲ್ಲ ಚಾಸಾ-1 ರವರು ನೋಡಿರುತ್ತಾರೆನ್ನುತ್ತಾರೆ. ನಾನು ಪೋಲೀಸರ ಮುಂದೆ ಮರುಹೇಳಿಕೆ ನೀಡಿದ್ದೇನೆ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-

ದಿಃ30-12-2014 ರಂದು ಪೋಲೀಸ್ ಠಾಣೆಯಲ್ಲಿ 3 ಜನ ಆರೋಪಿತರನ್ನು ಪೋಲೀಸರು ಹಾಜರುಪಡಿಸಿ ನಮ್ಮ ಮುಂದೆ ಅವರಿಗೆ ವಿಚಾರಿಸಿರುತ್ತಾರೆಂದರೆ ಸರಿ. ಅಲ್ಲಿ ಆರೋಪಿ ನಂ. 1, 3, 4 ರವರನ್ನು ವಿಚಾರಿಸಲಾಯಿತು ಎಂದರೆ ಸರಿ. ಸದರಿ ಮೂರು ಜನ ಆರೋಪಿತರು ನಮ್ಮ ಜೊತೆ 2 ನೇ ಆರೋಪಿ ಸಹಾ ಆ ದಿನ ಮನೆ ಕಳುವು ಮಾಡಲು ಬಂದಿದ್ದ ನಾವೆಲ್ಲರೂ ಸೇರಿ ಪೋಸ್ ಆಫೀಸ್ ಹತ್ತಿರ ಇರುವ ಒಂದು ಮನೆಗೆ ಹಾಕಿದ ಬೀಗವನ್ನು ಮುರಿದು 2 ಗಾಡ್ರೆಜಿನಲ್ಲಿದ್ದ ಸಾಮಾನುಗಳನ್ನು ಮತ್ತು ರೇಷ್ಮೆ ಸೀರೆಗಳನ್ನು ಕಳುವು ಮಾಡಿಕೊಂಡು ಹೋಗಿರುತ್ತೇವೆ ಅಂತಾ ತಿಳಿಸಿರುತ್ತಾರೆಂದರೆ ಸರಿ. ಮೂರು ಜನರಿಂದ 5 ಬಂಗಾರದ ಒಡವೆಗಳನ್ನು ಪೋಲೀಸರು ಆರೋಪಿತರಿಂದ ವಶಪಡಿಸಿಕೊಂಡರು ಅದನ್ನು ನಾವು ಗುರುತಿಸಿರುತ್ತೇವೆಂದರೆ ಸರಿ. ಆ ಸಮಯದಲ್ಲಿ ನನ್ನ ಜೊತೆ ನನ್ನ ಅತ್ತೆ, ಮಾವ ಮತ್ತು ನನ್ನ ಹೆಂಡತಿ ಇದ್ದರು ಎಂದರೆ ಸರಿ. ಆರೋಪಿತ ನಂ.2 ರವರಿಂದ ಇನ್ನೂ 2 ಬಂಗಾರದ ಹರಳಿನ ಉಂಗುರ ಮತ್ತು ಬಂಗಾರದ ಗಟ್ಟಿ ವಶಪಡಿಸಿಕೊಳ್ಳಬೇಕಾಗಿರುತ್ತದಂತಾ ತಿಳಿಸಿರುತ್ತಾರೆಂದರೆ ಸರಿ. ನ್ಯಾಯಾಲಯದ ಮುಂದಿರುವ 3 ನೇ ಆರೋಪಿತನು ಆ ದಿನ ಠಾಣೆಯಲ್ಲಿ ಹಾಜರಿದ್ದ ಎಂದರೆ ಸರಿಯಲ್ಲ. ಉಳಿದ ಆರೋಪಿತರನ್ನು ನಾನು ಆ ದಿನ ನೋಡಿದ್ದೇನೆ ನ್ಯಾಯಾಲಯದ ಮುಂದೆ ಅವರನ್ನು ಹಾಜರುಪಡಿಸಿದರೆ ಗುರುತಿಸಬಲ್ಲೆ ಎಂದರೆ ಸರಿಯಲ್ಲ. ನಾನು ಆರೋಪಿತರನ್ನು ಗುರುತಿಸಬಹುದಾದರೂ ಸಹಾ ಗುರುತಿಸಲು ಸಾಧ್ಯವಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ದಿನ ಪೋಲೀಸ್ ಠಾಣೆಗೆ ಪೋಲೀಸರು ಆರೋಪಿತರು ಮತ್ತು ಕಳುವಾದ ವಸ್ತುಗಳ ಗುರುತಿಸುವಿಕೆಗಾಗಿ ನಮಗೆ ಠಾಣೆಗೆ ಕರೆಸಿದ್ದರು ನಾವು ಹೋದಾಗ ಪೋಲೀಸರು ನಮಗೆ ಸದರಿ ವಸ್ತುಗಳನ್ನು ಕೊಟ್ಟಿರುವುದಿಲ್ಲ ನಂತರ ಚಾಸಾ-7 ರವರು ನ್ಯಾಯಾಲಯದಿಂದ ಆದೇಶ ಪಡೆದ ನಂತರ ಅವುಗಳನ್ನು ಚಾಸಾ-7 ರವರು ಬಿಡಿಸಿಕೊಂಡಿರುತ್ತಾರೆಂದರೆ ಸರಿ. ನಿಪಿ-13 ಮತ್ತು 14 ರಲ್ಲಿ

ಕಾಣುವ ಸೀರೆಗಳು ಮತ್ತು ಬಂಗಾರದ ಆಭರಣಗಳನ್ನು ಚಾಸಾ-7 ರವರು ಬಿಡಿಸಿಕೊಂಡ ಸಮಯದಲ್ಲಿ ಸದರಿ ನಿಪಿ-13 ಮತ್ತು 14 ಫೋಟೋಗಳನ್ನು ತೆಗೆದಿರುತ್ತಾರೆಂದರೆ ಸರಿ. ಸದರಿ ಫೋಟೋದಲ್ಲಿ ಕಾಣುವ ಸೀರೆಗಳು ಮತ್ತು ಬಂಗಾರದ ಆಭರಣಗಳು ಕಳುವಾದ ವಸ್ತುಗಳಾಗಿರುತ್ತವೆಂದರೆ ಸರಿ.

ಪಾಟೀ ಸವಾಲು. 1 ನೇ ಆರೋಪಿ ಪರ ಶ್ರೀ ಪಿ ಆರ್ ವಕೀಲರಿಂದಃ-

ಚಾಸಾ-1 ನನ್ನ ಹೆಂಡತಿ. ಕಳುವಾಗಿದೆ ಅಂತಾ ಹೇಳಲಾದ ವಸ್ತುಗಳ ಬಗ್ಗೆ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ ಆ ವಿಚಾರ ಎಲ್ಲಾ ನನ್ನ ಹೆಂಡತಿ ಚಾಸಾ-1 ರವರಿಗೆ ಗೊತ್ತು ಎಂದರೆ ಸರಿ. ಕಳುವಾಗಿದೆ ಅಂತಾ ಹೇಳಲಾದ ವಸ್ತುಗಳ ನಿಖರವಾದ ಮೌಲ್ಯ, ತೂಕ ನನಗೆ ಗೊತ್ತಿಲ್ಲವೆಂದರೆ ಸರಿ ಸಾಕ್ಷಿ ಮುಂದುವರೆದು ಚಾಸಾ-1 ರವರು ನನಗೆ ಹೇಳಿರುತ್ತಾರೆನ್ನುತ್ತಾರೆ. ನಾನು ಪೋಲೀಸರಿಗೆ ಹೇಳಿಕೆ ಮತ್ತು ಮರುಹೇಳಿಕೆಯನ್ನು ತಂಬ್ರಹಳ್ಳಿ ಪೋಲೀಸ್ ಠಾಣೆಯಲ್ಲಿ ಹೇಳಿರುತ್ತೇನೆ. 2 ನೇ ಸಾರಿ ನಾನು ಹೇಳಿಕೆ ಕೊಟ್ಟಿದ್ದು ದಿಃ30-12-2014 ರಂದು ಇರುತ್ತದೆ. ಮೊದಲನೇ ಸಾರಿ ನಾನು ಹೇಳಿಕೆ ಕೊಟ್ಟಿದ್ದು ದಿಃ13-12-2014 ರಂದು ಇರುತ್ತದೆ. ನಿಪಿ-14 ರಲ್ಲಿ ಕಾಣುವ ಸೀರೆಗಳು ಒಟ್ಟು ಎಷ್ಟು ಸೀರೆಗಳಿದ್ದವು ಮತ್ತು ಅವುಗಳ ನಿಖರವಾದ ಬೆಲೆ ಏನು ಎನ್ನುವುದು ನನಗೆ ಗೊತ್ತಿಲ್ಲ. ನಾನು ನನ್ನ ಮರುಹೇಳಿಕೆಯನ್ನು ಮಂಜುನಾಥ ಎನ್ನುವ ಪೋಲೀಸ್ ಅಧಿಕಾರಿಗಳ ಮುಂದೆ ಹೇಳಿದ್ದೇನೆ. ಕಳುವಾಗಿದೆ ಎನ್ನುವ ವಿಚಾರ ನನ್ನ ಹೆಂಡತಿಯಿಂದ ನನಗೆ ತಿಳಿಯಿತು ಎಂದರೆ ಸರಿ. ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ, ನನ್ನ ಹೆಂಡತಿ ಕೊಟ್ಟಿರುವ ದೂರಿಗೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ಮತ್ತು ಮರುಹೇಳಿಕೆ ನೀಡಿಲ್ಲವೆಂದರೆ ಸರಿಯಲ್ಲ. ಪೋಲೀಸರು ನಮಗೆ ಠಾಣೆಗೆ ಕರೆಸಿಲ್ಲ, ನಮ್ಮ ಸಮಕ್ಷಮ ಯಾವುದೇ ಆರೋಪಿತರನ್ನು ಹಾಜರುಪಡಿಸಿಲ್ಲ ಮತ್ತು ಯಾವುದೇ ವಸ್ತುಗಳನ್ನು ನಮಗೆ ತೋರಿಸಿಲ್ಲವೆಂದರೆ ಸರಿಯಲ್ಲ. ಕಳುವಾಗಿದೆ ಅಂತಾ ಹೇಳುವ ಘಟನೆಗೂ 1 ನೇ ಆರೋಪಿತನಿಗೂ ಯಾವುದೇ ಸಂಬಂಧವಿಲ್ಲವೆಂದರೆ ಸರಿಯಲ್ಲ.

ಪಾಟೀ ಸವಾಲು. 3 ನೇ ಆರೋಪಿ ಪರ ಶ್ರೀ ಎಸ್ ಎನ್ ಬಿ ವಕೀಲರಿಂದಃ-

ನಿಪಿ-13 ಮತ್ತು 14 ಫೋಟೋಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲವೆಂದರೆ ಸರಿಯಲ್ಲ. ಸದರಿ ಘಟನೆಗೂ 3 ನೇ ಆರೋಪಿಗೂ ಯಾವುದೇ ಸಂಬಂಧವಿಲ್ಲವೆಂದರೆ ಸರಿಯಲ್ಲ.

3 ನೇ ಆರೋಪಿಯಿಂದ ಪೋಲೀಸರು ಯಾವುದೇ ಬಂಗಾರ ಮತ್ತು ಸೀರೆಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

(1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀಸವಾಲನ್ನು ಸಹಾ 3 ನೇ ಆರೋಪಿ ಪರ ವಕೀಲರು ಅಳವಡಿಸಿಕೊಂಡಿರುತ್ತಾರೆ.)

<u>ಪಾಟೀ ಸವಾಲು. 2 ನೇ ಆರೋಪಿ ಪರ ಶ್ರೀ ಆರ್ ಬಿ ವಕೀಲರಿಂದಃ-</u>

ಬಂಗಾರ ಮತ್ತು ಸೀರೆಗಳು ನಮಗೆ ಸೇರಿರುತ್ತವಂತಾ ತೋರಿಸಲು ಪೋಲೀಸರ ಮುಂದೆ ಯಾವುದಾದರೂ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಅದು ನನ್ನ ಹೆಂಡತಿಗೆ ಗೊತ್ತು ಎನ್ನುತ್ತಾರೆ.ಸದರಿ ಕಳುವಾಗಿದೆ ಅಂತಾ ಹೇಳಲಾದ ಬಂಗಾರ ಮತ್ತು ಸೀರೆಗಳಿಗೆ ಮತ್ತು 2 ನೇ ಆರೋಪಿಗೆ ಯಾವುದೇ ಸಂಬಂಧವಿಲ್ಲವೆಂದರೆ ಸರಿಯಲ್ಲ. ಚಾಸಾ-1 ನನ್ನ ಹೆಂಡತಿಯಾಗಿರುವುದರಿಂದ ಅವಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀಸವಾಲನ್ನು ಸಹಾ 2 ನೇ ಆರೋಪಿ ಪರ ವಕೀಲರು ಅಳವಡಿಸಿಕೊಂಡಿರುತ್ತಾರೆ.)

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ